ನಾನು ಕ್ಷಣಕಾಲ ಆ ಚಿತ್ರವನ್ನೇ ದಿಟ್ಟಿಸುತ್ತಾ ಮನದಲ್ಲೇ ಅಂದುಕೊಂಡೆ 'ನನ್ನ ಮುದುಕ ಪತಿಯಿಂದ ಆಸ್ವಾದಿಸಲಾಗದ ಈ ಸೌಂದರ್ಯ, ಅವನ ಮರಣಾನಂತರ ಕಾಡ ಬೆಳದಿಂಗಳೇ ತಾನೆ? ಇಂತಹ ಶ್ರೇಷ್ಠ ಕಲಾವಿದನ ಅಮರ ಕಲೆಗೆ ಇದೊಂದು ಸಹಕಾರವಾಗುವುದಾದರೆ ನಾನೇಕೆ ನಗ್ನವಾಗಿ ನಿಲ್ಲಬಾರದು?' ಹಾಗೆ ನಿರ್ಧರಿಸಿಕೊಂಡೇ ಅಲ್ಲಿಂದ ಹೊರಬಂದೆ.

ಮರುದಿನ ಎಂದಿನಂತೆ ಕಮಲೆಯ ಜೊತೆಗೆ ಸ್ಟುಡಿಯೋಗೆ ಬರಲಿಲ್ಲ. ಒಬ್ಬಳೇ ಬಂದಿದ್ದೆ. 'ಇದೇಕೆ ಒಬ್ಬಳೇ ಬಂದೆ ಸುಗಂಧ?'
'ಅವಳಿಗೇನೋ ಕೆಲಸವಿತ್ತು'
'ಬಾ. ಉಷಾಳ ಸ್ವಪ್ನ ಪೂರೈಸೋಣ'
'ಬೇಡ, ಊರ್ವಶಿಯನ್ನೇ ಚಿತ್ರಿಸು'
'ಆ! ನಿಜವಾಗಿ! ನೀನದಕ್ಕೆ ಸಿದ್ಧವಾಗಿ ಬಂದಿದ್ದೀಯಾ? ಹಾಗಾದರೆ ಸಿದ್ಧಳಾಗಿ ನನ್ನನ್ನು ಕರೆ' ಎಂದು ತನ್ನ ಬಣ್ಣ ಕುಂಚಗಳ ಆಯ್ಕೆಗೆ ತೊಡಗಿದ ರವಿವರ್ಮ.

ನಾನು ತೆರೆಯ ಹಿಂದೆ ಸರಿದು ನನ್ನ ಕಂಚುಕವನ್ನು ಕೆಳಗೆಸೆದೆ. ಒಂದು ತೆಳುವಾದ ದಾವಣಿಯನ್ನು ಮೇಲೆ ಹೊದ್ದು ಹೊರಬಂದೆ. ರವಿವರ್ಮ ನನ್ನೆಡೆಗೆ ತಿರುಗಿದ. ನನ್ನ ವಕ್ಷಸ್ಥಲದ ಉಬ್ಬು ತಗ್ಗುಗಳನ್ನು ನನ್ನ ನಗ್ನವಾದ ಬೆನ್ನಿನ, ಕತ್ತಿನ ಸೌಂದರ್ಯವನ್ನು ಕಣ್ಣಿನಲ್ಲಿ ಹೀರಿಕೊಳ್ಳತೊಡಗಿದ. ಅದೇ ಸ್ಥಿತಿಯಲ್ಲಿ ಸ್ವಲ್ಪ ಹೊತ್ತು ನಿಂತವನು ನನ್ನ ದಾವಣಿಯನ್ನು ಎಳೆದು ನನಗೆ ಯಾವುದ್ಯಾವುದೋ ವಸ್ತುಗಳನ್ನು ತರಲು ಆಜ್ಞಾಪಿಸಿದ. ಹೀಗೆ ಅರ್ಧ ಗಂಟೆ ಕಾಲಹರಣ ಮಾಡುತ್ತಿದ್ದು ಕ್ಯಾನ್ವಾಸ್‌ನ್ನಾಗಲೀ, ಕುಂಚವನ್ನಾಗಲೀ, ಬಣ್ಣಗಳನ್ನಾಗಲೀ ಮುಟ್ಟದೆ ನಾನು ನಡೆದಾಡುವುದನ್ನೇ ನೋಡುತ್ತಿದ್ದ ರವಿವರ್ಮನನ್ನು ನೋಡಿ ನನಗೆ ಅಸಾಧಾರಣ ಕೋಪ ಬಂತು. ಸೆಟೆದು ನಿಂತು ಕೇಳಿದೆ 'ನಿನಗೇನು ಚಿತ್ರ ರಚಿಸುವ ಉದ್ದೇಶವಿದೆಯೇ? ಅಥವಾ ನನ್ನ ನಗ್ನ ದೇಹದ ಸವಿ ಸವಿಯಲೆಂದೇ ನಿಲ್ಲಿಸಿದ್ದೀಯೋ?' ಹಾಗೆ ಹೇಳುವಾಗ ನಾನು ನನ್ನ ನಿರ್ವಾಣ ಸ್ಥಿತಿಯನ್ನು ಸಂಪೂರ್ಣ ಮರೆತಿದ್ದೆ. ಎದೆಸೆಟೆದು ನಿಂತಿದ್ದೆ.

ರವಿವರ್ಮ ನಸುನಗುತ್ತಾ 'ಅಬ್ಬಾ! ಅಂತೂ ನನಗೆ ಬೇಕಾದ ಭಂಗಿ ಈಗ ಸಿಕ್ಕಿತು. ಇದಕ್ಕಾಗಿಯೇ ನಿನ್ನನ್ನು ಅಷ್ಟೊಂದು ಅಲೆದಾಡಿಸಿದೆ; ಕ್ಷಮಿಸು. ಅದೇ ಭಂಗಿಯಲ್ಲಿರು. ನಾನು ಚಿತ್ರ ಬರೆದುಕೊಳ್ಳುತ್ತೇನೆ' ಎಂದಾಗ ನನಗೆ ನನ್ನ ಕೋಪದ ಮೇಲೆಯೇ ಕೋಪ ಬಂತು, ನಾಚಿದೆ.

ರವಿವರ್ಮ ಊರ್ವಶಿಯನ್ನು ಬಿಡಿಸಿದ. 'ಈ ದಿನ ಇಷ್ಟು ಸಾಕು ನಾಳೆ ಬಣ್ಣ ತುಂಬೋಣ' ಎಂದ.

ಮರುದಿನವೂ ಕಮಲೆಯಿಲ್ಲದೆಯೇ ಸ್ಟುಡಿಯೋಕ್ಕೆ ಬಂದೆ. ರವಿವರ್ಮ ಬಣ್ಣ ತುಂಬಲು ಸಿದ್ಧನಾಗಿದ್ದ. ನಾನು ನಿನ್ನೆಯಂತೆಯೇ ಅರೆನಗ್ನಳಾಗಿ ನಿಂತೆ. ಅವನು ಚಿತ್ರ ಪೂರೈಸಿದ 'ಬಟ್ಟೆಗಳನ್ನು ಧರಿಸಿಕೋ ಸುಗಂಧಾ' ಎನ್ನುತ್ತಾ ತನ್ನ ಕುಂಚ, ಬಣ್ಣಗಳನ್ನು ಜೋಡಿಸತೊಡಗಿದ.

ನನ್ನ ಸ್ಥಿತಿ ಏನೆಂದು ನನಗೆ ತಾನೆ ತಿಳಿಯಬೇಕು! ನಾನೊಂದು ಜಡವಸ್ತುವಾಗಿದ್ದೆ ಅವನ ಪಾಲಿಗೆ! ಬರಿಯ ಭಾವನೆಗಳಿಲ್ಲದ ರೂಪದರ್ಶಿ! ಒಂದು ಹೂವನ್ನು, ಹಣ್ಣನ್ನು ಚಿತ್ರಿಸುವಂತೆ ನನ್ನನ್ನೂ ಚಿತ್ರಿಸಿದ. ನನ್ನ ದೇಹದ ನಗ್ನತೆ ಕೂಡ ಅವನಲ್ಲಿ ಯಾವ ಉದ್ರೇಕವನ್ನೂ, ಭಾವನೆಗಳನ್ನೂ ಉಂಟು ಮಾಡಲಿಲ್ಲ ಎಂದು ಅರಿವಾದಾಗ ನಾನು ತುಂಬಾ ಖಿನ್ನಳಾದೆ. ಬಿಕ್ಕಿಬಿಕ್ಕಿ ಅಳುತ್ತಾ ಅಲ್ಲಿದ್ದ ಪಲ್ಲಂಗದ ಮೇಲೆ ಹೋಗಿಬಿದ್ದೆ.

ರವಿವರ್ಮ ನನ್ನ ಅಳುವಿನ ಶಬ್ದ ಕೇಳಿ ಬೆಚ್ಚಿ ಹಿಂತಿರುಗಿದ. ಕುಂಚಬಣ್ಣಗಳನ್ನು ಅಲ್ಲೇ ಎಸೆದು, ಬಣ್ಣ ಕಲಸುವ ತಟ್ಟೆಯನ್ನು ಕೊಕ್ಕೆಗೆ ಸಿಕ್ಕಿಸಿ ನನ್ನತ್ತ ಓಡಿಬಂದ. ನನ್ನನ್ನು ತನ್ನತ್ತ ತಿರುಗಿಸಿಕೊಂಡು ಮುಗ್ಧನಾಗಿ ಕೇಳಿದ 'ಸುಗಂಧಾ! ಏನಿದೆಲ್ಲಾ? ನೀನು ಹೀಗೆ ಅತ್ತರೆ ನಾನೇನು ತಿಳಿದುಕೊಳ್ಳಲಿ? ನಿನ್ನ ಒಪ್ಪಿಗೆಯಿಂದ ತಾನೆ ನೀನು ನಗ್ನಳಾಗಿ ನಿಂತೆ! ನಾನೇನೂ ಬಲವಂತ ಮಾಡಲಿಲ್ಲವಲ್ಲ.'

'ರವಿ! ನನ್ನ ಹೃದಯವನ್ನು ನೀನು ಅರ್ಥ ಮಾಡಿಕೊಳ್ಳುವುದೇ ಇಲ್ಲವೆ? ನಾನು ನಿನ್ನಂತೆ ಕಲಾಕಾರಳಲ್ಲ. ಸಾಮಾನ್ಯ ಹೆಣ್ಣು, ನಾನು ಭಾವನಾಹೀನ ರೂಪದರ್ಶಿಯೂ ಅಲ್ಲ. ಮೃದು ಭಾವನೆಗಳುಳ್ಳ ವನಿತೆ. ನಾನು ಎಂದೋ ನಿನಗೆ ಮನಸೋತಿದ್ದೇನೆ. ನನ್ನ ಹೃದಯವನ್ನು ನಿನಗೆ ಅರ್ಪಿಸಿದ್ದರಿಂದಲೇ ಹೀಗೆ ನಾಚಿಕೆಯಿಲ್ಲದೆ ನಿನ್ನೆದುರು ನಿಂತೆ. ನೀನಾದರೂ ನನ್ನನ್ನು ಜಡವಾದ ವಸ್ತು ಎಂದೇ ಭಾವಿಸಿದೆ. ನಿನ್ನಂತಹ ನಿಷ್ಕ್ರಿಯತೆ ನನ್ನಿಂದ ಸಾಧ್ಯವಿಲ್ಲ' ಕಣ್ಣುಗಳಿಂದ ಬಳಬಳನೆ ನೀರು ಹರಿಯಿತು.

ತನ್ನ ತೋಳ್ಗಳಲ್ಲಿ ನನ್ನ ನಗ್ನ ದೇಹವನ್ನು ಹಿಡಿದಿದ್ದ ರವಿವರ್ಮ ನನ್ನ ಕಣ್ಣುಗಳನ್ನೇ ನೋಡುತ್ತಾ ಹೇಳಿದ 'ಸುಗಂಧಾ, ಒಬ್ಬ ಕಲಾವಿದನಿಗೆ ತನ್ನ ಮುಂದಿರುವ ಸೌಂದರ್ಯ ಆರಾಧಿಸಲ್ಪಡುವ ವಸ್ತು. ಆ ದಿವ್ಯ ಸೌಂದರ್ಯವನ್ನು ನಾನು ಪೂಜಿಸುವನೇ ವಿನಃ ಬೇರಾವ ದೃಷ್ಟಿಯಿಂದಲು ನೋಡುವುದಿಲ್ಲ. ಹಾಗೆ ನೋಡಿದೆನಾದರೆ ನನಗೆ ಚಿತ್ರ ರಚಿಸಲೂ ಸಾಧ್ಯವಾಗುವುದಿಲ್ಲ. ನಿನ್ನ ನಗ್ನ ದೇಹವನ್ನು ನಾನು ನೋಡಿದ್ದು ಹಾಗೆಯೇ. ನಿನ್ನ ಅನುಪಮ ಲಾವಣ್ಯವನ್ನು ಒಬ್ಬ ಭಕ್ತ ಭಗವಂತನ ಸೌಂದರ್ಯವನ್ನು ಆರಾಧಿಸುವಂತೆ ದೃಷ್ಟಿಸಿದೆನೇ ವಿನಃ ಕಾಮದ ಕಣ್ಣಿನಿಂದ ಅಲ್ಲ, ಕ್ಷಮಿಸು. ನಿನ್ನ ಮನಸ್ಸಿಗೆ ನೋವುಂಟು ಮಾಡಿದೆ' ಎನ್ನುತ್ತಾ ನನ್ನನ್ನು ಎಡತೋಳಲ್ಲಿ ಮಲಗಿಸಿಕೊಂಡೇ ನನ್ನ ಕಣ್ಣೀರನ್ನು ಬಲಗೈಯಿಂದ ಒರೆಸಿದ. ನಾನಿನ್ನು ತಡೆಯದಾದೆ. ಉನ್ಮತ್ತಳಂತೆ ನನ್ನ ತೋಳುಗಳಿಂದ ಅವನ ಕತ್ತುಗಳನ್ನು ತಬ್ಬಿಕೊಂಡು ಅವನ ಮುಖಕ್ಕೆ ನನ್ನ ಕೆನ್ನೆ ಉಜ್ಜಿದೆ.

'ನಾನೆಂದೋ ನಿನ್ನವಳು ರವಿ. ನಿನ್ನನ್ನು ದೇವಾಲಯದಲ್ಲಿ ಕಂಡ ಮೊದಲ ದಿನದಿಂದಲೇ ನಿನ್ನಲ್ಲಿ ನನ್ನ ಹೃದಯ ಲೀನವಾಗಿದೆ. ಅಂದ ಮೇಲೆ ಈ ದೇಹವೂ ನಿನ್ನದೇ ತಾನೆ? ನೀನು ನನ್ನನ್ನು ಸ್ವೀಕರಿಸಿದೆಯಾದರೆ ನಾನು ಧನ್ಯೆ' ಅವನ ಕೆನ್ನೆಯನ್ನು ಮುದ್ದಿಸಿದೆ.

ರವಿವರ್ಮ ನನ್ನನ್ನು ಪಲ್ಲಂಗದ ಮೇಲೆ ಮಲಗಿಸಿದ. 'ಹಿಮಗಿರಿಯ ಉಬ್ಬು ತಗ್ಗುಗಳಲ್ಲಿ ಹರಿದುಬಂದ ಗಂಗಾಮಾತೆಯಂತಿದೆ ನಿನ್ನ ಸೌಂದರ್ಯ. ಅದನ್ನು ನನ್ನದಾಗಿಸಿಕೊಳ್ಳಲು ನನಗೇಕೋ...' ಹಿಂಜರಿದ. ಆದರೆ ಆಹ್ವಾನಿಸುವ ನನ್ನ ಕಣ್ಣುಗಳನ್ನು ಅರೆಬಿರಿದ ನನ್ನ ತುಟಿಗಳನ್ನು ನೋಡುತ್ತಾ ಅವನಿಗೆ ಸುಮ್ಮನಿರಲಾಗಲಿಲ್ಲ. ಅಪ್ಪಿ ನನ್ನನ್ನು ಮತ್ತೆ ಮತ್ತೆ ಮುದ್ದಿಸಿದ. ನನ್ನ ಕಣ್ಣುಗಳನ್ನು... ಅಧರಗಳನ್ನು... ಕಪೋಲಗಳನ್ನು... ಕತ್ತುಗಳನ್ನು..... ಉತ್ತುಂಗ ವಕ್ಷಸ್ಥಲಗಳನ್ನು... ಓಹ್! ನಾನೆಂಥ ಸುಖಿ. ನನ್ನ ಆರಾಧ್ಯ ದೈವ, ನನ್ನನ್ನು ಆರಾಧಿಸುವ ಭಕ್ತ! ಇದೊಂದು ವಿರೋಧಾಭಾಸವೇ ಸರಿ.

ನನ್ನನ್ನು ತನ್ನೆದೆಗೆ ಅಪ್ಪಿಹಿಡಿದು ಹೇಳಿದ ರವಿವರ್ಮ 'ಸುಗಂಧಾ! ನಿನ್ನ ಹೆಸರಿನಷ್ಟೇ ಸುಂದರ ಈ ನಿನ್ನ ದೇಹ. ಈ ಮೃದು ಮಧುರ ಗುಲಾಬಿ ಪಕಳೆಗಳಂತಹ ತುಟಿಗಳು, ತುಂಬಿದ ಕಪೋಲಗಳು, ಶಂಖದಂತಹ ಕತ್ತು, ಗಿರಿಶಿಖರಗಳಂತೆ ಎದ್ದುನಿಂತ ಈ ನಿನ್ನ ಸ್ತನಗಳು, ಮತ್ತೆ ಮತ್ತೆ ನೋಡಿ ಮುದ್ದಿಸಬೇಕೆನಿಸುವ ನಿನ್ನ ಕಪ್ಪು ಕಣ್ಣುಗಳು, ನಾನು ಚಿತ್ರಿಸಬಲ್ಲೆನೇ ವಿನಃ ವರ್ಣಿಸಲಾರೆ! ಇವುಗಳನ್ನೆಲ್ಲಾ ಪಡೆದ ನಾನೇ ಧನ್ಯ. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ನಿನ್ನನ್ನೇ ನನಗೆ ಸಮರ್ಪಿಸುತ್ತಿರುವೆಯಲ್ಲಾ ಅದೇ ನನ್ನ ಭಾಗ್ಯ. ಬಾ! ಸುಗಂಧ! ನನ್ನವಳಾಗು ಇನ್ನೇಕೆ ಹಿಂಜರಿಕೆ? ನಾನು ನಿನ್ನವನೇ'. ರವಿವರ್ಮನ ವರ್ಣನೆಯಿಂದ ನಾನು ಕೆಂಪಾದೆ. ನನ್ನ ಕೆಂಪಾದ ಕದಪುಗಳನ್ನು ಅವನ ಮೀಸೆಯಿಂದ ಉಜ್ಜಿ ಮತ್ತಷ್ಟು ಕೆಂಪಾಗಿಸುತ್ತಾ ಹೇಳಿದ 'ನನ್ನ ಸುಗಂಧ, ನನ್ನ ಮುದ್ದು ಸುಗಂಧ, ನನ್ನ ಪ್ರೀತಿಯ ಸುಗಂಧ.'

ನಮ್ಮನ್ನೇ ಮರೆತು ನಾವೀರ್ವರೂ ಆ ಸಂಜೆ ಆನಂದದಿಂದ ಕಳೆದೆವು. ಎರಡು ಸರಿತೆಗಳು ಒಂದಾದಂತೆ, ಎರಡು ಮೇಘಗಳು ಒಂದನ್ನೊಂದು ಅಪ್ಪಿಕೊಂಡಂತೆ ಎರಡು ಜ್ಯೋತಿಗಳು ಒಂದರಲ್ಲೊಂದು ಲೀನವಾದಂತೆ, ನಾವಿಬ್ಬರೂ ಒಂದಾದೆವು.

ಅದೇ ಗುಂಗಿನಲ್ಲಿ ನನ್ನ ಕೋಳಿವಾಡದ ಮನೆ ತಲುಪಿದಾಗ ರಾತ್ರಿಯಾಗಿತ್ತು. ಚಿಕ್ಕಮ್ಮ ಕೆಂಡವಾಗಿ ಕಾರಿದಳು. 'ಬೆಳಗಿನ ಹೊತ್ತು ರೂಪದರ್ಶಿಯಾಗುವುದು ಸರಿ, ಇದೇನು ರಾತ್ರಿಯವರೆಗೂ ನಿನಗೆಲ್ಲಿ ಕೆಲಸ? ಆ ಮನುಷ್ಯ ನಿನಗೇನೋ ಮೋಡಿ ಮಾಡಿದ್ದಾನೆ. ನನಗೇನೂ ತಿಳಿಯುವುದಿಲ್ಲ ಎಂದುಕೊಂಡೆಯಾ? ನಿನ್ನ ತಂಗಿಯೂ ನಿನ್ನಂಥಾಗುವ ಮೊದಲು ಅವಳನ್ನು ಒಬ್ಬ ಧನಿಕ ಮುದುಕನಿಗೆ ಮದುವೆ ಮಾಡಿ ಕಳುಹಿಸುತ್ತೇನೆ. ಹದಿನಾರು ವರ್ಷಕ್ಕೇ ವಿಧವೆಯಾದರೂ ನಾನು, ನನ್ನನ್ನು ಒಬ್ಬ ಗಂಡಸು ಮುಟ್ಟದಂತೆ, ನನ್ನ ಶೀಲವನ್ನು ಕಾಪಾಡಿಕೊಂಡು ಬಂದಿದ್ದೇನೆ. ನನ್ನ ಬೆನ್ನ ಹಿಂದೆ ನೀನು ಹೀಗೆ ಹಾದರ ಮಾಡಿದರೆ ನನಗೆ ತಿಳಿಯಲ್ಲ ಎಂದುಕೊಂಡೆಯಾ?' ಚಿಕ್ಕಮ್ಮ ಕೂಗಾಡುತ್ತಲೇ ಇದ್ದಳು. ನಾನು ಕೇಳಿಸಿಕೊಳ್ಳದವಳಂತೆ ಮಹಡಿಯೇರಿದೆ. ಕಪಾಟಿನಲ್ಲಿದ್ದ ನನ್ನದೇ ಚಿತ್ರದ ಸೌಂದರ್ಯವನ್ನು ಆಸ್ವಾದಿಸುತ್ತಾ ಕಣ್ಬಿಟ್ಟುಕೊಂಡೇ ಮಲಗಿದೆ. 'ಇನ್ನು ಭಯವಿಲ್ಲ, ನನ್ನ ಸೌಂದರ್ಯ ಏನಾದರೂ ನನಗೆ ಚಿಂತೆಯಿಲ್ಲ, ಅದನ್ನು ಪಡೆದದ್ದಕ್ಕೆ ಸಾರ್ಥಕವಾಯಿತು' ಎಂಬ ಧನ್ಯಭಾವ ನನ್ನಲ್ಲಿ ಮೂಡಿದಾಗ ನಿಶ್ಚಿಂತೆಯಿಂದ ನಿದ್ದೆಹೋದೆ.

**(ಸಶೇಷ)**